-

ಅ.ದಾ. ಸಂಖ್ಯೆ:- 92/2018
ಡಿಡಬ್ಲ್ಯೂ:- 1

ದಿನಾಂಕಃ 10-08-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ. ಬಿ.ವಿ. ವಕೀಲರಿಂದ.

ವಾದಿಯವರು ಈ ದಾವೆಯಲ್ಲಿ ಏನು ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ಮೇಗರವಳ್ಳಿ ಗ್ರಾಮಪಂಚಾಯತಿಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ನಾನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಗ್ರಾಮಪಂಚಾಯತಿಯ ದಾಖಲಾತಿಗಳನ್ನು ತಿದ್ದುಪಡಿ ಮಾಡಿ ಕರ್ತವ್ಯ ಲೋಪ ಎಸಗುತ್ತಿದ್ದೇನೆ ಎಂದು ವಾದಿಯವರು ನನ್ನ ವಿರುದ್ಧ ದೂರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಸಿ.ಇ.ಓ ರವರು ಆದೇಶ ಹೊರಡಿಸಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ತೀರ್ಥಹಳ್ಳಿ ರವರಿಗೆ ದೂರಿನ ಅಂಶಗಳ ಬಗ್ಗೆ ಕೂಲಂಕುಶವಾಗಿ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ವರದಿಯನ್ನು ಕಛೇರಿಗೆ ಸಲ್ಲಿಸಲು ಸೂಚಿಸಿದೆ ಎಂದರೆ ಸರಿ. ಸಾಕ್ಷಿದಾರರರಿಗೆ ಸದರಿ ದಿಃ 15-07-2021 ರ ಜ್ಞಾಪನಾ ಪತ್ರವನ್ನು ತೋರಿಸಲಾಗಿ ಸಾಕ್ಷಿದಾರರ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-43 ಎಂದು ಗುರುತಿಸಲಾಯಿತು.

2. ವಾದಿಯವರು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಪರಿಶೀಲಿಸಿ ನೋಡಿರುತ್ತೇನೆ. ವಾದಿಯವರು ಮೇಗರವಳ್ಳಿ ಗ್ರಾಮದ ಸರ್ವೆ ನಂ. 309/ಬಿ ರ ಆಸ್ತಿಯನ್ನು ಖರೀದಿ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಜಮೀನು ಖರೀದಿಯಾದ ನಂತರ ಸರ್ವೆ ನಂ. 309/1 ಎಂದು ಪಹಣಿ ಪತ್ರಿಕೆಯಲ್ಲಿ ನಮೂದಾಗುತ್ತಾ ಬಂದಿದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾವುಗಳು ನ್ಯಾಯಾಲಯದಲ್ಲಿ ಮತ್ತು ಉಪ-ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿರುತ್ತೇವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾವೆ ಮತ್ತು ಮೇಲ್ಮನವಿಗಳು ವಿಚಾರಣೆಗೆ ಬಾಕಿ ಇರುತ್ತವೆ. ಸದರಿ ದಾವೆ ಮತ್ತು ಮೇಲ್ಮನವಿಗಳ ಸಂಖ್ಯೆ ನನಗೆ ಈಗ ನೆನಪಿಲ್ಲ. ವಾದಿಯವರ ಹೆಸರಿನಲ್ಲಿ ನಮೂದಾಗಿರುವ ಆರ್.ಟಿ.ಸಿ ಮತ್ತು ಮ್ಯುಟೇಶನ್ ಗಳನ್ನು ರದ್ದುಪಡಿಸುವಂತೆ ಕೋರಿ ನಾವು ಮೇಲ್ಮನವಿ ಸಲ್ಲಿಸಿರುವುದಿಲ್ಲ.

3. ಮೇಗರವಳ್ಳಿ ಗ್ರಾಮದ ಸರ್ವೆ ನಂ. 309 ರಲ್ಲಿ 2 ಎಕರೆ 2 ಗುಂಟೆ ಜಮೀನು ಗ್ರಾಮಪಂಚಾಯತಿ ಹೆಸರಿನಲ್ಲಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಜಮೀನು ನಮ್ಮ ಗ್ರಾಮಪಂಚಾಯತಿಗೆ ಯಾವಾಗ ವರ್ಗಾವಣೆಯಾಯಿತು ಎಂದು ನನಗೆ ನೆನಪಿಲ್ಲ. ಮೇಗರವಳ್ಳಿ ಗ್ರಾಮದ ಸರ್ವೆ ನಂ. 309/ಬಿ ಜಮೀನು ಮೂಲತಹ ಸರ್ಕಾರಿ ಜಮೀನಾಗಿರುತ್ತದೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ನಾನೇ ಅರ್ಜಿ ಸಲ್ಲಿಸಿ ಪಡೆದುಕೊಂಡು ಹಾಜರುಪಡಿಸಿರುತ್ತೇನೆ.

4. ಸರ್ವೆ ನಂ. 309 ರಲ್ಲಿ ಸರ್ಕಾರದಿಂದ ಗ್ರಾಮಪಂಚಾಯತಿಗೆ ಯಾವುದೇ ಜಮೀನುಗಳು ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪಂಚಾಯತಿ ಹೆಸರಿನಲ್ಲಿ ಯಾವುದೇ ಪಹಣಿ ಪತ್ರಿಕೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳನ್ನು ಸರ್ವೆಯರ್ ರವರು ಸರ್ವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರ ಪ್ರಕಾರ ದಾವಾ ಎ-ಅನುಸೂಚಿ ಸ್ವತ್ತನ್ನು ಹದ್ದುಬಸ್ತು ಸರ್ವೆ ಮಾಡಿದ್ದಾರೆ ಎಂದರೆ ಸರಿ. ಸದರಿ ನಿಪಿ-4 ರ ಹದ್ದುಬಸ್ತು ಸರ್ವೆಯನ್ನು ನಾವು ಪ್ರಶ್ನೆ ಮಾಡಿ, ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸರ್ವೆ ನಂ. 309 ರಲ್ಲಿ ಗ್ರಾಮಪಂಚಾಯತಿ ಹೆಸರಿನಲ್ಲಿರುವ ಜಮೀನನ್ನು ನಾವು ಬಳಕೆ ಮಾಡಿಕೊಳ್ಳುತ್ತಿದ್ದೇವೆ. ವಾದಿಯವರು ಖರೀದಿಸಿದ ಜಮೀನನ್ನು ನಾವುಗಳು ನಮ್ಮ ಗ್ರಾಮಪಂಚಾಯತಿ ಜಮೀನು ಎಂದು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ಸರ್ವೆ ನಂ. 309 ರಲ್ಲಿ ಗ್ರಾಮಪಂಚಾಯತಿ ಹೆಸರಿಗೆ 2 ಎಕರೆ 2 ಗುಂಟೆ ಜಮೀನು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದು ನಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಸರ್ವೆ ನಂ. 309 ರಲ್ಲಿ ಗ್ರಾಮಪಂಚಾಯತಿಯ ಸ್ವಾಧೀನತೆಯಲ್ಲಿರುವ ಜಮೀನನ್ನು ಸರ್ವೆಗೆ ಒಳಪಡಿಸಿರುವುದಿಲ್ಲ.

-

ಸರ್ವೆ ಆಗದೇ ಇರುವುದರಿಂದ ಗ್ರಾಮಪಂಚಾಯತಿಯ ಜಮೀನಿನಲ್ಲಿ ಯಾರು ಸ್ವಾಧೀನತೆಯಲ್ಲಿ ಇದ್ದಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ವಾದಿಯವರಿಂದ ಪ್ರತಿವಾದಿಗಳ ಜಮೀನನ್ನು ಬಿಡಿಸಿಕೊಳ್ಳಲು ನಾವು ಯಾವುದೇ ಸಿವಿಲ್ ದಾವೆಯನ್ನು ಸಲ್ಲಿಸಿರುವುದಿಲ್ಲ. ಮೇಗರವಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷರು ಈ ದಾವೆಯ ವಾದಿಯವರ ವಿರುದ್ಧ ಸೀನಿಯರ್ ಸಿವಿಲ್ ಜಡ್ಜ್ ತೀರ್ಥಹಳ್ಳಿ ರವರ ಮುಂದೆ ವಾದಿಯವರು ಗ್ರಾಮಪಂಚಾಯತಿ ಜಮೀನನ್ನು ಕಬಳಿಸಿದ್ದರು ಎಂದು ದೂರುಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿದಾರರಿಗೆ ಪಿ.ಸಿ.ರ್. ನಂ. 9/2019 ನ್ನು ತೋರಿಸಿಲಾಗಿ ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು ನಿಪಿ-44 ಎಂದು ಗುರುತಿಸಲಾಯಿತು. ಸದರಿ ದೂರಿನ ಆಧಾರದ ಮೇಲೆ ಮಾನ್ಯ ಸೀನಿಯರ್ ಸಿವಿಲ್ ಜಡ್ಜ್ ತೀರ್ಥಹಳ್ಳಿ ರವರ ಆದೇಶದ ಮೇರೆಗೆ ಆಗುಂಬೆ ಪೊಲೀಸರು ತನಿಖೆ ಕೈಗೊಂಡು ಬಿ-ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿದಾರರಿಗೆ ಸದರಿ ಬಿ-ವರದಿಯನ್ನು ತೋರಿಸಿದ್ದು ಸಾಕ್ಷಿದಾರರು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ಅದನ್ನು ನಿಪಿ-45 ಎಂದು ಗುರುತಿಸಲಾಯಿತು.

5. ಸರ್ವೆ ನಂ. 309 ರ ಪಕ್ಕದಲ್ಲಿ ಸರ್ವೆ ನಂ. 3 ಮತ್ತು ಸರ್ವೆ ನಂ. 5 ರ ಜಮೀನುಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮಠಾಣಾ ವ್ಯಾಪ್ತಿಯ ಜಮೀನುಗಳಿಗೆ ಅಥವ ಪ್ರದೇಶಕ್ಕೆ ಸರ್ವೆ ನಂಬರ್ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ. 309 ರಲ್ಲಿ ಮೇಗರವಳ್ಳಿ ಗ್ರಾಮಪಂಚಾಯತಿಯ ಗ್ರಾಮಠಾಣಾ ಪ್ರದೇಶ ಬರುತ್ತದೆ. ಸರ್ವೆ ನಂ. 309 ರಲ್ಲಿ ಗ್ರಾಮಪಂಚಾಯತಿಯ ಗ್ರಾಮಠಾಣಾ ಪ್ರದೇಶ ಬರುತ್ತದೆ ಎಂದು ಆರ್.ಟಿ.ಸಿ ಆಧಾರದ ಮೇಲೆ ಹೇಳುತ್ತಿದ್ದೇನೆ.

6. ತಿಮ್ಮಪ್ಪ ಹೆಗ್ಡೆ ಬಿನ್ ಅಪ್ಪಣ್ಣ ಹೆಗ್ಡೆ ರವರ ಪರಿಚಯ ನನಗೆ ಇರುವುದಿಲ್ಲ. ಸುಭಾಷ ಬಿನ್ ಪುಟ್ಟಯ್ಯ ಹೆಗ್ಡೆ ರವರನ್ನು ನಾನು ನೋಡಿರುತ್ತೇನೆ. ಸುಭಾಷ ಬಿನ್ ಪುಟ್ಟಯ್ಯ ಹೆಗ್ಡೆ ರವರಿಗೆ ಸಂಬಂಧಿಸಿದಂತೆ ನಮ್ಮ ಗ್ರಾಮಪಂಚಾಯತಿಯಲ್ಲಿ ದಾಖಲಾತಿಗಳು ಇದ್ದ ಬಗ್ಗೆ ನನಗೆ ನೆನಪಿಲ್ಲ. ದಾವಾ ಸ್ವತ್ತುಗಳು ಎಲ್ಲಿ ಬರುತ್ತವೆ ಎಂದು ನಾನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ದಾಖಲಾತಿಗಳ ಆಧಾರದ ಮೇಲೆ ದಾವಾ ಅನುಸೂಚಿ ಸ್ವತ್ತುಗಳನ್ನು ದೃಢೀಕರಿಸಿಕೊಂಡಿರುತ್ತೇನೆ. ದಾವಾ ಆಸ್ತಿಯಲ್ಲಿ ಅಂಗನವಾಡಿ ಇರುತ್ತದೆ. ಸದರಿ ಅಂಗನವಾಡಿಯು ಒಂದು ಗುಂಟೆ ವಿಸ್ತೀರ್ಣದಲ್ಲಿ ಇದೆ ಎಂದರೆ ಸರಿ. ನಾನು ಹೇಳುವಂತಹ ಗ್ರಾಮಠಾಣಾ ಪ್ರದೇಶವು ದಾವಾ-ಎ ಅನುಸೂಚಿ ಸ್ವತ್ತಿನ ಪಕ್ಕ ಬರುತ್ತದೆ.

<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ.